ಅ) ಬಂದಿದೆ.

ಆ) ಹಿಪ್ಪರಗಿ ಬಾಂದಾರಿನ ಸುರಕ್ಷತಾ ದೃಷ್ಟಿಯಿಂದ ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಭದ್ರತಾ ವ್ಯವಸ್ಥೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಇ) ಇನ್ನೊಂದು ಸೇತುವೆ ನಿರ್ಮಿಸಲು ಸರ್ಕಾರವು ಆಲೋಚಿಸಿದೆ.

ಈ) ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿ ಅಂದಾಜು ಪತ್ರಿಕೆ, ವಿನ್ಯಾಸ ಮತ್ತು ಡಿಟಿಪಿ ಪರಿಶೀಲನೆ ಹಂತದಲ್ಲಿದ್ದು, ಮುಂದೆ ಅಂದಾಜು ಪತ್ರಿಕೆ ಹಾಗೂ ಡಿಟಿಪಿ ವಿನ್ಯಾಸಗಳನ್ನು ತಾಂತ್ರಿಕ ಸಲಹಾ ಸಮಿತಿ ಹಾಗೂ ಸಕ್ಷಮ ಪ್ರಾಧಿಕಾರದವರಿಂದ ಅನುಮೋದನೆ ಪಡೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಪರ್ಯಾಯ ಸೇತುವೆ ನಿರ್ಮಾಣ ಕುರಿತು ಪರಿಶೀಲಿಸಲಾಗುವುದು.

ಕಾವೇರಿ ನೀರಾವರಿ ನಿಗಮ

97(346) ಶ್ರೀ ಸುರೇಶ್ ಗೌಡ ಬಿ (ತುಮಕೂರು ಗ್ರಾಮಾಂತರ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯಲ್ಲಿ ಎಷ್ಟು ಜನ ಸೌಡಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; 2004ರಿಂದ ಎಷ್ಟು ಜನರನ್ನು ಟೆಂಡರ್ ಮೂಲಕ ನೇಮಿಸಿಕೊಳ್ಳಲಾಗಿದೆ;

ಆ) ಇವರಿಗೆ ನಿಗದಿಪಡಿಸಿರುವ ವೇತನ ಎಷ್ಟು; ಎಷ್ಟು ಸೌಡಿಗಳ ವೇತನದಲ್ಲಿ ಪಿ.ಎಫ್., ಇ.ಎಸ್.ಐ., ಹಣ ಕಟಾಯಿಸಿಕೊಂಡು ಪಾವತಿಸಲಾಗಿದೆ;

ಇ) ನೀರು ನಿರ್ವಹಣೆಗೆ ಸೌಡಿಗಳ ಕೊರತೆ ಇದೆಯೇ; ಸೌಡಿಗಳ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸೌಡಿಗಳಿಗೆ ಸಮರ್ಪಕ ವೇತನ ನೀಡಿಕೆ, ಪಿ.ಎಫ್. ಮತ್ತು ಇ.ಎಸ್.ಐ. ಸೌಲಭ್ಯ ಒದಗಿಸಲು ಹಾಗೂ ಇದರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) 1) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ 2010–11ನೇ ಸಾಲಿಗೆ ಒಟ್ಟು 1,593 ಸೌಡಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

2) 2004–05 ರಿಂದ 2010–11ರವರೆಗೆ ವರ್ಷವಾರು ಕೋಟೇಷನ್ ಮುಖಾಂತರ ಕಾರ್ಯನಿರ್ವಹಿಸಿರುವ ಸೌಡಿಗಳ ಸಂಖ್ಯೆ:

ಕ್ರ. ಸಂ.	ಸಾಲು	ಕೋಟೇಷನ್ ಮುಖಾಂತರ ನೇಮಿಸಿಕೊಂಡಿರುವ ಸೌಡಿಗಳ ಸಂಖ್ಯೆ
1	2004–05	851
2	2005–06	1088
3	2006–07	1105
4	2007–08	1307
5	2008–09	1401
6	2009–10	1375
7	2010–11	1343

ಅ) 1) 2004–05 ರಿಂದ 2010–11ರವರೆಗೆ ಸೌಡಿಗಳನ್ನು ಕೋಟೇಷನ್ ಮುಖಾಂತರ ನೇಮಿಸಿಕೊಂಡಿರುವ ಸೌಡಿಗಳಿಗೆ ನಿಗದಿಪಡಿಸಿರುವ ವರ್ಷವಾರು ದಿನಗೂಲಿ ದರಗಳು, ವಲಯವಾರು ಈ ಕೆಳಗಿನಂತಿದೆ.

ಕ್ರ ಸಂ.	ಸಾಲು	ವಲಯವಾರು ದಿನಗೂಲಿ ದರಗಳು		
		ತುಮಕೂರು	ಮೈಸೂರು	ಗೊರೂರು
1	2	3	4	5
1	2004–05	80.90	80.90	93.00
2	2005–06	80.90	80.90	96.00
3	2006–07	80.90	80.90	96.00
4	2007–08	102.05	80.90	103.00
5	2008–09	102.05	100.00	103.00
6	2009–10	126.50	126.50	103.00
7	2010–11	141.00	141.00	139.00

2) ಕೋಟೇಷನ್ ಆಧಾರದ ಮೇಲೆ ನೇಮಿಸಿಕೊಂಡಿರುವ ಸೌಡಿಗಳಿಗೆ ದರಪಟ್ಟಿಯಲ್ಲಿನ ದರ ಸೂಚಿಯಂತೆ ಗುತ್ತಿಗೆದಾರರನೇ ವೇತನ ಪಾವತಿಸುತ್ತಿರುವುದರಿಂದ ಪಿ.ಎಫ್. ಮತ್ತು ಇ.ಎಸ್.ಐ. ಹಣವನ್ನು ನಿಗಮದ ವತಿಯಿಂದ ಕಟಾಯಿಸುತ್ತಿರುವುದಿಲ್ಲ.

ಇ) 1) ಹೌದು ನಿಗಮದ ವ್ಯಾಪ್ತಿಯಲ್ಲಿ ಯೋಜನೆಗಳ ನೀರು ನಿರ್ವಹಣೆಗಾಗಿ ಸೌಡಿಗಳ ಕೊರತೆ ಇದೆ. ಕೋಟೇಷನ್ ಆಧಾರದ ಮೇಲೆ ಗುತ್ತಿಗೆದಾರರ ಮುಖಾಂತರ ಸೌಡಿಗಳನ್ನು ನೇಮಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ. ಈ ವ್ಯವಸ್ಥೆಯಿಂದಾಗಿ ಅವರುಗಳ ನೇಮಕಾತಿ ಬಗ್ಗೆ ಸರ್ಕಾರವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

2) ಗುತ್ತಿಗೆದಾರರ ಮುಖಾಂತರ ನೇಮಿಸಿಕೊಂಡಿರುವ ಸೌಡಿಗಳಿಗೆ ಆಯಾ ಸಾಲಿನ ದರಪಟ್ಟಿಯಲ್ಲಿ ನಿಗದಿಪಡಿಸಿರುವ ದರದಂತೆ ಗುತ್ತಿಗೆದಾರರೇ ವೇತನ ಪಾವತಿ ಮಾಡುತ್ತಿದ್ದಾರೆ. ಗುತ್ತಿಗೆದಾರರು ನೇಮಿಸಿಕೊಂಡಿರುವ ಸೌಡಿಗಳಿಗೆ ಸಮರ್ಪಕ ವೇತನ ನೀಡಿಕೆ, ಪಿ.ಎಫ್. ಮತ್ತು ಇ.ಎಸ್.ಐ. ಸೌಲಭ್ಯವನ್ನು ನೀಡುವ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.

3) ಕೋಟೇಷನ್ ಆಧಾರದ ಮೇಲೆ ಗುತ್ತಿಗೆದಾರರ ಮುಖಾಂತರ ಸೌಡಿಗಳನ್ನು ನೇಮಿಸಿಕೊಂಡಿರುವುದರಿಂದ, ಅವರನ್ನು ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆ

98(63) ಶ್ರೀ ಸುರೇಶ್ ಗೌಡ (ನಾಗಮಂಗಲ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ಬೆಕ್ಕಳಲೆ, ಯಪಚನಹಳ್ಳಿ, ಕಿರಂಗೂರು, ಹಳೇಹಳ್ಳಿ, ತಗ್ಗಹಳ್ಳಿ, ಮೂಡ್ಯ, ಚಿಕ್ಕೋನಹಳ್ಳಿ ಏತ ನೀರಾವರಿ ಯೋಜನೆಗಳಿಗೆ ಯಾವ ವರ್ಷದಲ್ಲಿ ಅನುಮೋದನೆ ನೀಡಲಾಗಿದೆ; ಎಷ್ಟು ವರ್ಷಗಳಿಂದ ಈ ಯೋಜನೆಗಳು ವಿಳಂಬವಾಗಿವೆ ಹಾಗೂ ಈವರೆವಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ;

ಆ) ಯಾವ ಯೋಜನೆ ಪೂರ್ಣಗೊಂಡಿವೆ ಹಾಗೂ ಪ್ರತಿ ಯೋಜನೆಯ ವಸ್ತುಸ್ಥಿತಿ ವಿವರ ನೀಡುವುದು;